ಕೆ. ರತ್ನ ಪ್ರಭ
ಮುಖ್ಯ ಕಾರ್ಯದರ್ಶಿ
K. RATNA PRABHA
CHIEF SECRETARY

ಕರ್ನಾಟಕ ಸರ್ಕಾರ
GOVERNMENT OF KARNATAKA

# 320, 3ನೇ ಮಹಡಿ, ವಿಧಾನ ಸೌಧ
ಬೆಂಗಳೂರು - 560 001
# 320, 3rd Floor, Vidhana Soudha
Bengaluru - 560 001
e-mail : cs@karnataka.gov.in
Phone : Off. +91-80-22252442 / 22253716
Fax : +91-80-22258913

ಸಂಖ್ಯೆ: ಮುಕಾ/ 500 /2018

ದಿನಾಂಕ: 13.04.2018

# ಸುತ್ತೋಲೆ

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂ: 2368/2011 ರಲ್ಲಿ ದಿನಾಂಕ 9.2.2017ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಆದೇಶ ಸಂ: ಸಿಆಸುಇ 182 ಎಸ್ ಆರ್ ಆರ್ 2011 ದಿ: 6.5.2017ರ ಮೂಲಕ ಮಾರ್ಗಸೂಚಿಗಳನ್ನು ಹೊರಡಿಸಿದೆ. ಮುಂದುವರೆದು, ದಿನಾಂಕ 27.3.2018ರಂದು ಸುತ್ತೋಲೆ ಹೊರಡಿಸಿ, ಕೈಗೊಳ್ಳಬೇಕಾದ ತತ್ಪರಿಣಾಮ ಕ್ರಮಗಳ ಬಗ್ಗೆ ಇಲಾಖೆಗಳಿಗೆ ಸೂಚಿಸಿದೆ. ಸರ್ಕಾರದ ಸುತ್ತೋಲೆ ಸಂ: ಸಿಆಸುಇ 639 ಸೇನೇನಿ 2017 ದಿನಾಂಕ 4.4.2018ರ ಮೂಲಕ ಗ್ರೂಪ್-ಎ (ಕಿರಿಯ ಶ್ರೇಣಿ) ವೃಂದದವರಿಗೆ ಶೇ.15 ಮತ್ತು ಶೇ.3 ರಷ್ಟು ಮುಂಬಡ್ತಿ ಮೀಸಲಾತಿಯು ಪ್ರಸ್ತುತವೂ ಮುಂದುವರೆದಿರುವುದಾಗಿ ಸ್ಪಷ್ಟೀಕರಣ ನೀಡಲಾಗಿದೆ. ಆದಾಗ್ಯೂ ಕೆಲವು ಇಲಾಖೆಗಳಲ್ಲಿ ಶೇ.15 ಮತ್ತು ಶೇ.3ರಷ್ಟು ಮುಂಬಡ್ತಿಯನ್ನು ಪರಿಗಣಿಸದೆ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿರುವುದಾಗಿ ಹಾಗೂ ಲೋಪಗಳನ್ನು ಸರಿಪಡಿಸಿಕೊಳ್ಳಲು ಸದರಿ ಜ್ಯೇಷ್ಠತಾ ಪಟ್ಟಿಗಳನ್ನು ಪುನಃ ಪರಿಶೀಲಿಸಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿಳಿಸುತ್ತಿರುವುದಾಗಿ ಅನೇಕ ನೌಕರ / ಅಧಿಕಾರಿ ಸಂಘಗಳು ಸರ್ಕಾರಕ್ಕೆ ದೂರು ನೀಡಿದ್ದು, ಇದನ್ನು ಸರಿಪಡಿಸುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದೆ. ಕಾನೂನು ಇಲಾಖೆಯು ಸಂಖ್ಯೆ: ಲಾ 68 (ಟಿ) / ಅಇಪ್ರಾಯ/2018 ದಿ: 12.4.2018ರಲ್ಲಿ ಈ ಕೆಳಕಂಡಂತೆ ತಿಳಿಸಿದೆ:

> *"ಜೇಷ್ಠತಾ ಪಟ್ಟಿಗಳನ್ನು ಒಮ್ಮೆ ಅಂತಿಮಗೊಳಿಸಿದ ನಂತರ ಸರ್ಕಾರ ಅಥವಾ ಸಕ್ಷಮ ಪ್ರಾಧಿಕಾರ ಅಂತಹ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಅವಕಾಶವಿಲ್ಲವೆಂಬುವುದು ಸಾಮಾನ್ಯ ತತ್ವವಾದರೂ ಮಾನ್ಯ ಕೆ.ಎ.ಟಿ.ಯು ಶ್ರೀ ಮಾರನಬಾಸರಿ ಎನ್.ಬಿ ಪ್ರಕರಣದಲ್ಲಿ ನೀಡಿದ ಸಾಮಾನ್ಯ ತತ್ವಕ್ಕೆ ನೀಡಿರುವ ಕೆಲವೊಂದು ಅಪವಾದಗಳ ಹಿನ್ನೆಲೆಯಲ್ಲಿ ಮೇಲ್ನೋಟಕ್ಕೆ ತಪ್ಪೆಂದು ಕಂಡುಬರುವ (Patent error) ಪ್ರಕರಣಗಳಲ್ಲಿ ಅಂತಹ ತಪ್ಪುಗಳನ್ನು ಸರಿಪಡಿಸಲು ಈಗಾಗಲೇ ಅಂತಿಮಗೊಳಿಸಲಾಗಿರುವ ಜೇಷ್ಠತಾ ಪಟ್ಟಿಗಳನ್ನು ಪುನಃ ಪರಿಷ್ಕರಿಸಲು ಬಾಧಕವಿರುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ."*